# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | **:** (121) 104 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | :ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ | :08-12-2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಶಾಲೆಗಳಲ್ಲಿ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ: | ಹೌದು<br>ಪರಿಗಣಿಸಿದೆ. |
| ಆ) | ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು/ ತಾಲ್ಲೂಕುವಾರು ಮಾಹಿತಿ ಒದಗಿಸುವುದು) | ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಒಟ್ಟು ಸಂಖ್ಯೆ: 46112. |

ಜಿಲ್ಲಾವಾರು ಮಾಹಿತಿ ಈ ಕೆಳಗಿನಂತಿದೆ

| Sl.No | District | Type of School | | | |
|---|---|---|---|---|---|
| | | LPS | HPS | HS | Total |
| 1. | BAGALKOT | 446 | 776 | 202 | 1424 |
| 2. | BALLARI | 229 | 366 | 125 | 720 |
| 3. | BELAGAVI | 512 | 814 | 154 | 1480 |
| 4. | BELAGAVI CHIKKODI | 688 | 993 | 232 | 1913 |
| 5. | BENGALURU RUAL | 594 | 423 | 64 | 1081 |
| 6. | BENGALURU U NORTH | 217 | 249 | 68 | 534 |
| 7. | BENGALURU U SOUTH | 393 | 440 | 95 | 928 |
| 8. | BIDAR | 493 | 710 | 169 | 1372 |
| 9. | CHAMARAJANAGARA | 310 | 403 | 87 | 800 |
| 10 | CHIKKABALLAPURA | 848 | 512 | 111 | 1471 |
| 11 | CHIKKAMANGALURU | 597 | 639 | 116 | 1352 |
| 12 | CHIRTADURGA | 775 | 825 | 117 | 1717 |
| 13 | DAKSHINA KANNADA | 225 | 658 | 171 | 1054 |
| 14 | DAVANAGERE | 476 | 576 | 135 | 1187 |
| 15 | DHARWAD | 213 | 511 | 121 | 845 |
| 16 | GADAG | 182 | 398 | 116 | 696 |
| 17 | HASSAN | 1152 | 953 | 240 | 2345 |
| 18 | HAVERI | 447 | 671 | 165 | 1283 |
| 19 | KALBURGI | 752 | 930 | 303 | 1985 |
| 20 | KODAGU | 108 | 248 | 47 | 403 |
| 21 | KOLAR | 1123 | 604 | 126 | 1853 |
| 22 | KOPPAL | 362 | 519 | 193 | 1074 |

| | | | | | |
|---|---|---|---|---|---|
| 23 | MANDYA | 664 | 794 | 215 | 1673 |
| 24 | MYSURU | 889 | 926 | 233 | 2048 |
| 25 | RAICHUR | 646 | 719 | 235 | 1600 |
| 26 | RAMANAGARA | 672 | 437 | 108 | 1217 |
| 27 | SHIVAMOGGA | 852 | 918 | 164 | 1934 |
| 28 | TUMAKURU | 1170 | 736 | 131 | 2037 |
| 29 | TUMAKURU MADHUGIRI | 683 | 519 | 96 | 1298 |
| 30 | UDUPI | 192 | 356 | 106 | 654 |
| 31 | UTTARA KANNADA | 435 | 471 | 49 | 955 |
| 32 | UTTARA KANNADA SIRSI | 584 | 497 | 77 | 1158 |
| 33 | VIJAYANAGARA | 385 | 538 | 125 | 1048 |
| 34 | VIJAYAPURA | 786 | 969 | 184 | 1939 |
| 35 | YADAGIRI | 450 | 440 | 144 | 1034 |
| | **Grand Total** | **19550** | **21538** | **5024** | **46112** |

| | | |
|---|---|---|
| ಇ) | ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಲು ಕಾರಣಗಳೇನು; ದಾಖಲಾತಿ ಹೆಚ್ಚು ಮಾಡಲು ಸರ್ಕಾರದಿಂದ ಯಾವುದಾದರೂ ಅಗತ್ಯ ಕ್ರಮ ಕೈಗೊಳ್ಳಲಾಗಿದೆಯೇ;(ಮಾಹಿತಿ ಒದಗಿಸುವುದು) | ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ದಾಖಲಾತಿ ಕಡಿಮೆಯಾಗಲು ಕಾರಣಗಳು:<br>• ಖಾಸಗಿ ಶಿಕ್ಷಣ ಸಂಸ್ಥೆಗಳು ಹೆಚ್ಚಾಗಿದ್ದು, ಈ ಶಾಲೆಗಳಿಗೆ ವಿದ್ಯಾರ್ಥಿಗಳು ಹೆಚ್ಚಾಗಿ ದಾಖಲಾಗುತ್ತಿರುವುದರಿಂದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿರುತ್ತದೆ.<br>• ಪೋಷಕರು ಆರ್ಥಿಕ ಸಂಕಷ್ಟದಿಂದಾಗಿ ವಲಸೆ ಹೋಗುವುದು.<br>• ವೈಯಕ್ತಿಕ ಸಮಸ್ಯೆಯಿಂದಾಗಿ ಶಾಲೆಗೆ ಮಕ್ಕಳು ಗೈರು ಹಾಜರಾಗುವುದು.<br>**ಮೇಲ್ಕಂಡ ಅಂಶಗಳ ಸುಧಾರಣೆಗಾಗಿ ಹಾಗೂ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ಈ ಕೆಳಕಂಡಂತೆ ಕ್ರಮ ಕೈಗೊಂಡಿದೆ:-**<br>• ಶತಮಾನ ಪೂರೈಸಿದ ಶಾಲೆಗಳನ್ನು ಪಾರಂಪರಿಕ ಶಾಲೆಗಳೆಂದು ಗುರ್ತಿಸಿ ಶಾಲಾ ನವೀಕರಣಕ್ಕಾಗಿ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.<br>• ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1 ನೇ ತರಗತಿಯಿಂದ ಪ್ರಸ್ತುತ ಇರುವ ಕನ್ನಡ /ಇತರೆ ಮಾಧ್ಯಮದ ಜೊತೆಗೆ ಒಟ್ಟು 8538 ಆಂಗ್ಲ (ದ್ವಿಭಾಷಾ) (Bilingual) ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ.<br>• ಪ್ರಸ್ತುತ ವರ್ಷ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಸುತ್ತೋಲೆ ಸಂಖ್ಯೆ:E-59908 DSERT/EVG/ಪ.ಅ.ಮೌ (LBA)/2025-26 ದಿನಾಂಕ: 16.07.2025ರಲ್ಲಿ ಶಾಲೆಗಳಲ್ಲಿ ಡಿ.ಎಸ್.ಇ.ಆರ್.ಟಿ. ವತಿಯಿಂದ ಅಧ್ಯಾಯ ಆಧಾರಿತ ಮೌಲ್ಯಾಂಕನ **(Lesson Based Assessment)** ಕೈಗೊಳ್ಳಲಾಗುತ್ತಿದೆ. ಇದರಿಂದ ಯಾವುದೇ ವಿದ್ಯಾರ್ಥಿಗಳು ಆಯಾ ಪಾಠದಲ್ಲಿನ ಕಲಿಕಾಂಶಗಳನ್ನು |

| | | |
|---|---|---|
| | | ಪಡೆದುಕೊಳ್ಳದೇ ಇದ್ದಲ್ಲಿ, ಆ ಕಲಿಕಾಂಶಗಳನ್ನು ಅದೇ ಸಂದರ್ಭದಲ್ಲಿ ಕಲಿಯಲು ಶಿಕ್ಷಕರು ಪರಿಹಾರಾತ್ಮಕ ಕ್ರಮಗಳನ್ನು ಕೈಗೊಂಡು ಮುಂದೆ ಸಾಗಲು ತಿಳಿಸಲಾಗಿದೆ.<br>• ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ 2024-25ನೇ ಸಾಲಿನಲ್ಲಿ ಒಟ್ಟು 150 ಶಾಲೆಗಳು ಮತ್ತು 2025-26ನೇ ಸಾಲಿನಲ್ಲಿ ಒಟ್ಟು 7 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಉನ್ನತೀಕರಿಸಲಾಗಿದೆ.<br>• ಸರ್ಕಾರಿ ಶಾಲೆಗಳಿಗೆ ಅನ್ನಭಾಗ್ಯ, ಕ್ಷೀರಭಾಗ್ಯ, ಪಠ್ಯಪುಸ್ತಕ, ಸಮವಸ್ತ್ರ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಪಿ.ಟಿ.ಆರ್ ಆಧಾರದಲ್ಲಿ ಅಗತ್ಯ ಸಂಖ್ಯೆಯ ಶಿಕ್ಷಕರನ್ನು ಒದಗಿಸಲಾಗುತ್ತಿದೆ.<br>• ಸರ್ಕಾರಿ ಪ್ರೌಢ ಶಾಲೆಗಳಲ್ಲಿ ವಿಭಾಗಗಳ ಸಂಖ್ಯೆಯನ್ನು ಆಧರಿಸಿ ಶಿಕ್ಷಕರ ಹುದ್ದೆಗಳನ್ನು ನೀಡಲಾಗುತ್ತದೆ. ವಿಭಾಗ ಮತ್ತು ವಿದ್ಯಾರ್ಥಿಗಳ ಅನುಪಾತ 1:70 "4" ವಿಭಾಗಗಳ ಏಕ ಮಾಧ್ಯಮ ಶಾಲೆಗಳ ಸಿಬ್ಬಂದಿ ಪಟ್ಟಿಯ ಪ್ರಕಾರ, ಮುಖ್ಯೋಪಾಧ್ಯಾಯರನ್ನು ಹೊರತುಪಡಿಸಿ 7 ಹುದ್ದೆಗಳು ಇರಬೇಕು. ಪ್ರಥಮ ಭಾಷೆ-1, ದ್ವಿತೀಯ ಭಾಷೆ 1, ತೃತೀಯ ಭಾಷೆ-1 ಕಲೆ 1. ಗಣಿತ (PCM)-1, ವಿಜ್ಞಾನ (CBZ)-1, ದೈಹಿಕ ಶಿಕ್ಷಣ ಶಿಕ್ಷಕ (ಗ್ರೇಡ್-1) ಹುದ್ದೆ-1 ಅನ್ನು ನಿಗದಿಪಡಿಸಲಾಗಿದೆ. ಏಕ ಮಾಧ್ಯಮವನ್ನು ಹೊಂದಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ, 5 ಅಥವಾ ಹೆಚ್ಚಿನ ವಿಭಾಗಗಳಿದ್ದರೆ, ಪ್ರತಿ ಹೆಚ್ಚುವರಿ ವಿಭಾಗಕ್ಕೆ 1.5 ಶಿಕ್ಷಕರನ್ನು ಒದಗಿಸಲಾಗುತ್ತಿದೆ.<br>• 2025-26ನೇ ಸಾಲಿನಲ್ಲಿ ಒಟ್ಟು 182 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಸರ್ಕಾರಿ ಪ್ರೌಢ ಶಾಲೆಗಳನ್ನಾಗಿ ಉನ್ನತೀಕರಿಸಿದೆ ಹಾಗೂ 2025-26ನೇ ಸಾಲಿನಲ್ಲಿ ಎ ಡಿ ಬಿ ನೆರವಿನೊಂದಿಗೆ 500 ಶಾಲೆಗಳನ್ನು ಕೆಪಿಎಸ್ ಶಾಲೆಗಳನ್ನಾಗಿ ಅಭಿವೃದ್ಧಿಪಡಿಸಲು ಯೋಜಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ಇಪಿ 64 ಎಂಪಿಇ 2024, ಬೆಂಗಳೂರು, ದಿನಾಂಕ: 15.10.2025ರಲ್ಲಿ 474 ಶಾಲೆಗಳನ್ನು ಕೆ.ಪಿ.ಎಸ್. ಆಗಿ ಉನ್ನತೀಕರಿಸಲು ಆದೇಶಿಸಿದೆ ಹಾಗೂ **ಕಲ್ಯಾಣ ಕರ್ನಾಟಕ ಅಕ್ಷರ ಆವಿಷ್ಕಾರ** ಯೋಜನೆಯಡಿಯಲ್ಲಿ 200 ಶಾಲೆಗಳನ್ನು ಕೆಪಿಎಸ್ ಶಾಲೆಗಳಾಗಿ ಉನ್ನತೀಕರಿಸಲು ಆದೇಶಿಸಿದೆ.<br>• ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣತಾ ಮಟ್ಟವನ್ನು ಹೆಚ್ಚಿಸಲು ವಿಷಯವಾರು ಸಂಪನ್ಮೂಲ ವ್ಯಕ್ತಿಗಳನ್ನು ಒಂದು ದಿನಕ್ಕೆ 2-3 ಜಿಲ್ಲೆಗಳಂತೆ ವಿಭಾಗವಾರು ಒಂದು ಕಡೆ ಸೇರಿಸಿ ವಿವಿಧ ದಿನಾಂಕಗಳಂದು ತರಬೇತಿಯನ್ನು ನೀಡಲಾಗಿರುತ್ತದೆ. ಸದರಿ ಸಂಪನ್ಮೂಲ ವ್ಯಕ್ತಿಗಳು ತಾಲ್ಲೂಕುವಾರು ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ.<br>• 14 ನವೆಂಬರ್ 2025ರಂದು ರಾಜ್ಯಾದ್ಯಂತ ಮಹಾ ಪೋಷಕರ ಸಭೆಯನ್ನು ಎಲ್ಲಾ ಶಾಲೆಗಳಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಉತ್ತಮಪಡಿಸುವ ಬಗ್ಗೆ ಪೋಷಕರ ಜವಾಬ್ದಾರಿಯನ್ನು ಮನವರಿಕೆ ಮಾಡಲಾಯಿತು. ಸದರಿ ಸಭೆಯಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ |

| | | |
|---|---|---|
| | | ಮಂಡಲಿಯಿಂದ ಮಾಡಿರುವ ವಿದ್ಯಾರ್ಥಿ ಅಂಕಣದ ಬಗ್ಗೆ ಪರಿಚಯ ನೀಡಲಾಯಿತು.<br>• ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ ಜಾಲತಾಣದ ಮುಖಪುಟದಲ್ಲಿ ವಿದ್ಯಾರ್ಥಿ ಅಂಕಣ (Student Corner) ವಿನ್ಯಾಸಗೊಳಿಸಿ ವಿದ್ಯಾರ್ಥಿಗಳ ಪರೀಕ್ಷಾ ತಯಾರಿಗೆ ಅನುಕೂಲವಾಗುವ ಪರೀಕ್ಷಾ ಅಧ್ಯಯನ ವಿಷಯಗಳನ್ನು ಇಂದೀಕರಿಸಲಾಗಿದೆ. ಪರೀಕ್ಷೆ-1,2,3 ರ ವೇಳಾಪಟ್ಟಿಯನ್ನು ಮೊದಲೇ ಪೂರೈಸಲಾಗಿದೆ. ಹಾಗೆಯೇ ಮೂರು ಪೂರ್ವ ಸಿದ್ಧತಾ ಪರೀಕ್ಷೆಯ ವೇಳಾಪಟ್ಟಿಯನ್ನು ಸಹ ಪ್ರಕಟಿಸಲಾಗಿದೆ.<br>• ಈಗಾಗಲೇ ವಿದ್ಯಾರ್ಥಿಗಳ ಪರೀಕ್ಷಾ ತಯಾರಿಗೆ ಅನುಕೂಲವಾಗುವಂತೆ ವಿಷಯವಾರು ನೀಲ ನಕ್ಷೆ (Blue Print) ರಚಿಸಿ ಅದರನ್ವಯ ಮಾದರಿ ಪ್ರಶ್ನೆ ಪತ್ರಿಕೆಗಳನ್ನು (Model Question Papers) ತಯಾರಿಸಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳು ಸದರಿ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಸಿಸಿ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಸಹಕಾರಿಯಾಗಿದೆ.<br>• ಎಲ್ಲಾ ವಿಷಯಗಳ ಸಮಗ್ರ ಪ್ರಶ್ನೆಕೋಠಿಗಳನ್ನು (Exhaustive Question Bank) ಸಂಬಂಧಪಟ್ಟ ವಿಷಯ ತಜ್ಞರಿಂದ ರಚಿಸಲಾಗಿದೆ. ಪ್ರಶ್ನೆಕೋಠಿಯಲ್ಲಿ ಅಧ್ಯಾಯವಾರು ವಿವಿಧ ಅಂಕಗಳ ಪ್ರಶ್ನೆಗಳನ್ನು ಸುಲಭ/ಸಾಧಾರಣ/ಕಠಿಣ ಎಂದು ವರ್ಗೀಕರಿಸಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.<br>• ನೀಲನಕ್ಷೆ, ಮಾದರಿ ಪ್ರಶ್ನೆಪತ್ರಿಕೆಗಳು ಹಾಗೂ ಪ್ರಶ್ನೆಕೋಠಿಗಳನ್ನು ಬಳಸಿಕೊಂಡು ಮುಂಬರುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಕುರಿತಂತೆ ಶಿಕ್ಷಕರಿಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ಹಾಗೂ DSERT ಸಹಯೋಗದೊಂದಿಗೆ ಜಿಲ್ಲಾವಾರು, ವಿಷಯವಾರು ಪುನಶ್ಚೇತನ ತರಬೇತಿ ಶಿಬಿರಗಳನ್ನು ನಡೆಸಲಾಗಿದೆ.<br>• ಫಲಿತಾಂಶ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತಂತೆ ರಾಜ್ಯದ ಎಲ್ಲಾ ಶಿಕ್ಷಕರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ONLINE ಕಾರ್ಯಾಗಾರವನ್ನು ನಡೆಸಲಾಗಿದೆ ಹಾಗೂ ಸದರಿ ವಿಡಿಯೋಗಳನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ವೀಕ್ಷಣೆಗಾಗಿ YOUTUBE ನಲ್ಲಿ ಲಭ್ಯಗೊಳಿಸಲಾಗಿದೆ.<br>• ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಮೂರು ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ಜನವರಿ-2026ರ ಮಾಹೆಯಿಂದ ನಡೆಸಲು ಉದ್ದೇಶಿಸಲಾಗಿದೆ.<br>• ಜನವರಿ-2026 ರ ಅಂತ್ಯದೊಳಗೆ ಪಠ್ಯಕ್ರಮ ಬೋಧನೆಯನ್ನು ಪೂರ್ಣಗೊಳಿಸಿ ಫೆಬ್ರುವರಿ-2026 ರಿಂದ ಪುನರಾವರ್ತನೆ ಹಾಗೂ ಪೂರ್ವಸಿದ್ಧತಾ ಪರೀಕ್ಷೆಗಳಿಗೆ ಅಗತ್ಯ ತಯಾರಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.<br>• ಫಲಿತಾಂಶ ಸುಧಾರಣಾ ಕ್ರಮಗಳ ಅನುಷ್ಠಾನ ಕುರಿತಂತೆ ಜಿಲ್ಲಾ |

ಮಟ್ಟದ ಅಧಿಕಾರಿಗಳಿಗೆ ಜವಾಬ್ದಾರಿ ನೀಡಿ ನಿರಂತರ ಅನುಪಾಲನೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

- ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಕನಿಷ್ಠ ಉತ್ತೀರ್ಣತಾ ಪ್ರಮಾಣವನ್ನು ಶೇ.35 ರಿಂದ ಶೇ.33 ಕ್ಕೆ ಮಾರ್ಪಡಿಸಿ 2025-26ನೇ ಸಾಲಿನ ಹಾಗೂ ಮುಂಬರುವ ಪರೀಕ್ಷೆಗಳಿಗೆ ಅನ್ವಯವಾಗುವಂತೆ ಘೋಷಿಸಲಾಗಿದೆ. ಇದರಿಂದ ಉತ್ತೀರ್ಣತಾ ಪ್ರಮಾಣ ಹೆಚ್ಚಳವಾಗಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಪ್ರಮಾಣ ಅಧಿಕವಾಗುತ್ತದೆ. ವಿದ್ಯಾರ್ಥಿಗಳು ಶೈಕ್ಷಣಿಕ ಹಾಗೂ ಸಾಮಾಜಿಕ ಮುಖ್ಯವಾಹಿನಿಯಲ್ಲಿ ಮುಂದುವರೆಯಲು ಸಹ ಇದು ಸಹಕಾರಿಯಾಗಲಿದೆ.
- 2024-25ನೇ ಸಾಲಿನಲ್ಲಿ ಪ್ರಕಟವಾಗಿರುವ ಫಲಿತಾಂಶವನ್ನು ಪರೀಕ್ಷಾ ಮಂಡಳಿ ಮತ್ತು ಡಿ.ಎಸ್.ಇ.ಆರ್.ಟಿ. ಯಿಂದ ವಿಶ್ಲೇಷಿಸಿ ಒಟ್ಟಾರೆಯಾಗಿ ಯಾವ ವಿಷಯದಲ್ಲಿ ಮತ್ತು ಆ ವಿಷಯಗಳ ಯಾವ ನಿರ್ದಿಷ್ಟ ಕಲಿಕಾಂಶಗಳಲ್ಲಿ ಕಡಿಮೆ ಸಾಧನೆ ಆಗಿದೆ ಎಂಬುದನ್ನು ಕಂಡು ಹಿಡಿದು, ಆ ನಿರ್ದಿಷ್ಟ ಕಲಿಕಾಂಶಗಳ ಬೋಧನೆ/ಕಲಿಕೆಗಳ ಕುರಿತು ಅವಶ್ಯ ಕ್ರಮವಹಿಸಲಾಗುತ್ತಿದೆ.
- ಸೇತುಬಂಧ ಮೌಲ್ಯಮಾಪನ ಆಧಾರದ ಮೇಲೆ ಗುರುತಿಸಲ್ಪಟ್ಟ ವಿದ್ಯಾರ್ಥಿಗಳಿಗೆ ವಿಶೇಷ ಬೋಧನಾ ತರಗತಿಗಳನ್ನು ನಡೆಸಲಾಗುತ್ತಿದೆ.
- ಕ್ಲಿಷ್ಟ ಪರಿಕಲ್ಪನೆಗಳನ್ನು ಗುರುತಿಸಿ ವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸಲು ಶಾಲೆಯ ಅವಧಿಯ ಮೊದಲು ಮತ್ತು ಶಾಲಾ ಅವಧಿಯ ನಂತರ ಶಾಲೆಯಲ್ಲಿಯೇ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ.
- ಆಯಾ ತರಗತಿ ನಿರ್ಧಿಷ್ಟ ಕಲಿಕಾ ಫಲಗಳನ್ನು ವಿದ್ಯಾರ್ಥಿಗಳು ಸಾಧಿಸುವಂತಾಗಲು ಒಂದನೇ ತರಗತಿಯಿಂದಲೇ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.
- ಫಲಿತಾಂಶವನ್ನು ಉತ್ತಮಪಡಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಶಿಕ್ಷಕರಿಗೆ ಶಾಲಾ ದಿನಗಳನ್ನು ಹೊರತುಪಡಿಸಿ ಪುನಶ್ಚೇತನಾ ತರಬೇತಿಗಳನ್ನು ಆಯೋಜಿಸಲಾಗಿದೆ.
- ಗುಣಮಟ್ಟದ ಫಲಿತಾಂಶ ಪಡೆಯಲು ವಿವಿಧ ಹಂತಗಳಲ್ಲಿ ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸಿ ಕ್ರಮವಹಿಸಲಾಗಿದೆ.
- 2026-27ನೇ ಶೈಕ್ಷಣಿಕ ಸಾಲಿಗೆ ಮಕ್ಕಳ ದಾಖಲಾತಿ ಜಾಗೃತಿ ಅಭಿಯಾನ ನಡೆಸುವ ಹಾಗೂ ಸರ್ಕಾರಿ ಶಾಲೆಗಳು/ಪದವಿ ಪೂರ್ವ ಕಾಲೇಜುಗಳಲ್ಲಿ ಅರ್ಹ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳಲು ಅಗತ್ಯ ಪೂರ್ವ ಸಿದ್ಧತೆ ಮಾಡಲು ಕ್ರಮವಹಿಸಲಾಗಿದ್ದು, ಈ ಕುರಿತು ಸರ್ಕಾರದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.
- ಈ ಹಿನ್ನೆಲೆಯಲ್ಲಿ, ಪ್ರಸ್ತುತ ವರ್ಷ ನವೆಂಬರ್-2025 ರಿಂದ ವಿವಿಧ ಕಾರಣಗಳಿಂದ ಶಾಲೆ/ಕಾಲೇಜು ಬಿಟ್ಟ 6 ರಿಂದ 8ರ ವಯೋಮಾನದ ಮಕ್ಕಳನ್ನು ಪುನಃ ಶಾಲೆ/ಕಾಲೇಜಿಗೆ ಕರೆ ತರಲು ಹಾಗೂ 2026-27ನೇ ಸಾಲಿನ ದಾಖಲಾತಿಗೆ ಸಂಬಂಧಿಸಿದಂತೆ ಜನವಸತಿ ಪ್ರದೇಶದ ಅರ್ಹ

<table>
<tr>
<td></td>
<td></td>
<td>ವಯೋಮಾನದ ಮಕ್ಕಳನ್ನು ಗುರುತಿಸಿ ದಾಖಲಿಸಲು "ದಾಖಲಾತಿ ಜಾಗೃತಿ ಅಭಿಯಾನ" ಕಾರ್ಯಕ್ರಮವನ್ನು ಮಾನ್ಯ ಇಲಾಖಾ ಸಚಿವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದು, ಸದರಿ ಅಭಿಯಾನವು ನವೆಂಬರ್ 2025 ರಿಂದ ಜೂನ್ 2026 ರವರೆಗೆ ನಿರಂತರವಾಗಿ ಜಾರಿಯಲ್ಲಿರುತ್ತದೆ.<br><br><u>ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಿಗೆ ಪಾಠಗಳನ್ನು ಬೋಧಿಸುವ ಕೆಲಸಗಳಿಗಿಂತ ಶಾಲೆಗಳ ಇನ್ನಿತರೆ ಬೋಧಕೇತರ ಕೆಲಸಗಳಲ್ಲಿ ತೊಡಗಿಸುತ್ತಿರುವುದನ್ನು ನಿಯಂತ್ರಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು:-</u><br>• ದಿನಾಂಕ: 01.07.2025 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ಸುತ್ತೋಲೆ ಹೊರಡಿಸಿದ್ದು ಸದರಿ ಸುತ್ತೋಲೆಯ ಪ್ರಕಾರ ಸರ್ಕಾರಿ ಶಾಲೆಗಳಲ್ಲಿ ಶಾಲೆಯ ಸಮಯದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಶಾಲೆಯಲ್ಲಿಯೇ ಹಾಜರಿದ್ದು ಶಿಕ್ಷಣದ ಹಕ್ಕು ಕಾಯ್ದೆಯ ಅಡಿಯಲ್ಲಿ ಪ್ರತಿದಿನ ಶಾಲೆಯ ಹಂತದಲ್ಲಿ ಬೋಧನೆ ಮತ್ತು ಕಲಿಕೆ ನಡೆಸಲು ಉತ್ತಮ ಬೋಧನೆ ನೀಡಲು ಶಿಕ್ಷಕರು ಹಾಗೂ ಶಾಲಾ ಮುಖ್ಯೋಪಾಧ್ಯಾಯರು ಸಂಪೂರ್ಣವಾಗಿ ಶಾಲೆಯಲ್ಲಿಯೇ ಇರುವುದು ಕಡ್ಡಾಯಗೊಳಿಸಲಾಗಿದೆ.<br>• ಬೋಧನಾ ಅವಧಿಯಲ್ಲಿ ಯಾವುದೇ ಸಮಾಲೋಚನಾ ಸಭೆ, ತರಬೇತಿ ಹಾಗೂ ಇನ್ನಿತರ ಚಟುವಟಿಕೆಗಳಲ್ಲಿ ಭಾಗಿಯಾಗಿ ಬೋಧನೆಗೆ ಅಡಚಣೆಯಾಗದಂತೆ ಕ್ರಮವಹಿಸಲು ಸೂಚನೆ ನೀಡಿದ್ದು, ಪಾಲಿಸಲಾಗುತ್ತಿದೆ.</td>
</tr>
<tr>
<td>ಈ)</td>
<td>ಕಳೆದ ಎರಡು ವರ್ಷಗಳಲ್ಲಿ ಎಷ್ಟು ಖಾಸಗಿ ಶಾಲೆಗಳ ಪ್ರಾರಂಭಕ್ಕೆ ಅನುಮತಿ ನೀಡಲಾಗಿದೆ?</td>
<td>ಕಳೆದ ಎರಡು ವರ್ಷಗಳಲ್ಲಿ ಖಾಸಗಿ ಶಾಲೆಗಳ ಪ್ರಾರಂಭಕ್ಕೆ ಅನುಮತಿ ನೀಡಲಾದ ಮಾಹಿತಿ ಈ ಕೆಳಕಂಡಂತಿದೆ (SATS ಮಾಹಿತಿ ಪ್ರಕಾರ).
<table>
<tr><th>ಕ್ರ.ಸಂ.</th><th>ಶೈಕ್ಷಣಿಕ ವರ್ಷ</th><th>ಅನುಮತಿ ನೀಡಲಾದ ಖಾಸಗಿ ಶಾಲೆಗಳ ಸಂಖ್ಯೆ</th></tr>
<tr><td>01</td><td>2024-25</td><td>849</td></tr>
<tr><td>02</td><td>2025-26</td><td>799</td></tr>
</table></td>
</tr>
</table>

ಇಪಿ 128 ಪಿಎಂಎ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು